"ಇಷ್ಟೆಲ್ಲಾ ಆದ್ಮೇಲೆ ಹೀಗಂದ್ರೆ ಹೇಗೆ ತಾಯಿ? ನೀನಾಗಿ ಕೊಡೋದಕ್ಕೆ ಒಪ್ಪಿಕೊಂಡು ಬಂದಿದ್ದೆ. ನೀನಿಲ್ಲಿಗೆ ಬಂದದಿನವೇ ನಿನ್ನನ್ನು ಕೇಳಿದ್ದೆನಲ್ಲ! ಆದರೂ ನಿನ್ನ ಇಚ್ಛೆಗೆ ವಿರುದ್ಧವಾಗಿ ಬಲವಂತ ಮಾಡುವ ಪ್ರಸಕ್ತಿಯೇ ಇಲ್ಲ. ನನ್ನ ಮಾತನ್ನು ನಾನು ಉಳಿಸಿಕೊಳ್ತೀನಿ. ನಿಮ್ಮವರನ್ನೆಲ್ಲಾ ಕೂಡಲೇ ಹೊರಟುಬರುವಂತೆ ಹೇಳು." ಹೇಳಿದರು ಮಾಧವರಾಯರು. ಅವರ ಮುಖ ಪ್ರಶಾಂತವಾಗಿತ್ತು.

"ಅಯ್ಯಾ ನಾನು ಕಿಡ್ನಿ ಮಾರ್ಕೊಳ್ಳೋದಿಲ್ಲ ಅಂದೆನೇ ಹೊರತು, ಅಮ್ಮನವರಿಗೆ ಕಿಡ್ನಿ ಕೊಡೋದಿಲ್ಲ ಅಂತ ಹೇಳಿಲ್ಲ. ನಿಮ್ಮಂಥ ದೊಡ್ಡ ಮನಸ್ಸಿನವರಿಗೆ ಈ ಒಂದು ಚಿಕ್ಕ ಸಹಾಯ ಕೂಡಾ ಮಾಡ್ದೇ ಹೋದ್ರೆ ನಮ್ಮ ಬದುಕಿಗೆ ಅರ್ಥವೇನಿರುತ್ತೆ ಅಯ್ಯಾ?..." ಎಂದಳು ಸತ್ಯವತಿ.

ಮಾಧವರಾಯರ ದೃಷ್ಟಿಯಲ್ಲಿ ಆ ಕ್ಷಣದಲ್ಲಿ ಸತ್ಯವತಿ ಆಕಾಶದೆತ್ತರಕ್ಕೆ ಬೆಳೆದುಬಿಟ್ಟಳು. ಅವಳ ಮಾತಿಗೆ ಅವರ ಮನ ಕಲಕಿತು.

"ಇಷ್ಟುಕಾಲ ನಮ್ಮನ್ನು ಮಹಾತ್ಯಾಗಿಗಳು, ಸಮಾಜೋದ್ಧಾರಕರು ಅಂತೆಲ್ಲಾ ಜನ ಹೊಗಳುತ್ತಿದ್ದರು. ನಾವು ಹಾಗೆ ಅಂದುಕೊಳ್ಳದಿದ್ದರೂ ಮನಸ್ಸಿನಲ್ಲಿ ಸ್ವಲ್ಪ ಉಬ್ಬಿಹೋಗಿದ್ದಂತೂ ನಿಜ. ಆದರೆ, ಒಂದೇಬಾರಿಗೆ ನಮ್ಮನ್ನು ಕುಬ್ಜರನ್ನಾಗಿಸಿಬಿಟ್ಟೆ. ನಮ್ಮ ಮನಸ್ಸಿನ ಯಾವುದೋ ಮೂಲೆಯಲ್ಲಿ ಅಡಗಿದ್ದ ಅಹಂ ಅನ್ನು ಹೊಸಕಿಹಾಕಿಬಿಟ್ಟೆ. ನಿನ್ನ ಋಣ ತೀರಿಸುವಂತಹುದಲ್ಲ. ಇಷ್ಟು ದಿವಸಕ್ಕೆ ನಿಜವಾದ ಸೇವಾ ಮನೋಭಾವವಿರುವ ವಾರಸುದಾರಳು ನಮಗೆ ದೊರೆತಳು. ಮುಂದಿನ ದಿನಗಳಲ್ಲಿ ನಾವು ಇರಲಿ ಬಿಡಲಿ, ನಾವು ಪ್ರಾರಂಭಿಸಿರುವ ಸೇವಾಕಾರ್ಯಗಳು ಎಂದಿಗೂ ನಿಲ್ಲಲಾರವು ಎನ್ನುವ ಭರವಸೆ ದೊರೆಯಿತು. ನನಗೆ... ನನಗೆ ತುಂಬಾ ತುಂಬಾ ಸಂತೋಷವಾಗ್ತಿದೆ, ತಾಯಿ" ಸತ್ಯವತಿಯ ಎರಡೂ ಕೈಗಳನ್ನು ಕೃತಜ್ಞಾಪೂರ್ವಕವಾಗಿ ಹಿಡಿದುಕೊಳ್ಳುತ್ತಾ ಹೇಳಿದರು. ಅವರ ಕಣ್ಣುಗಳು ತುಂಬಿ ಬಂದಿದ್ದವು.

'ಮನುಷ್ಯತ್ವ ಎನ್ನುವುದು ಯಾರೊಬ್ಬರ ಸ್ವತ್ತು ಅಲ್ಲ. ಅದು ಮನುಷ್ಯನಲ್ಲಿ ಅಂತರ್ಗತವಾಗಿರುವ ಸಹಜಗುಣ. ಸಂದರ್ಭೋಚಿತವಾಗಿ ಹೊರಬೀಳುತ್ತದೇನೋ!...' ಎಂದುಕೊಂಡರು ಮಾಧವರಾಯರು.

## ವಿರಿಂಚಿ (ತಲ್ಲಾಪ್ರಗಡ ಗೋಪಾಲಕೃಷ್ಣ)

ಪಶ್ಚಿಮ ಗೋದಾವರಿ ಜಿಲ್ಲೆಯ ಪಾಲಕೊಲ್ಲುವಿನಲ್ಲಿ ಜನನ. ಅದೇ ಜಿಲ್ಲೆಯ ನರಸಾಪುರದಲ್ಲಿ ವಿದ್ಯಾಭ್ಯಾಸ. ವಿಜ್ಞಾನ, ವಾಣಿಜ್ಯಶಾಸ್ತ್ರ ವಿಷಯಗಳಲ್ಲಿ ಪದವೀಧರ. 'ಈನಾಡು', 'ಆಂಧ್ರಪ್ರಭ' ಪತ್ರಿಕೆಗಳಲ್ಲಿ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಲ್ಲಿ ಕೆಲಸ ಮಾಡಿದ್ದಾರೆ. ಸುಮಾರು 130ಕ್ಕೂ ಹೆಚ್ಚು ಕತೆಗಳನ್ನು ಬರೆದಿದ್ದಾರೆ.

## ವಿಜಯಾಶಂಕರ

ಅನುವಾದಕಿ ಮೈಸೂರಿನಲ್ಲಿ ನೆಲೆಸಿರುವ ನಿವೃತ್ತ ಉಪನ್ಯಾಸಕಿ. ಇಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. 'ಇದು ಯಾವ ನ್ಯಾಯ', 'ಸ್ವರ್ಣಖಡ್ಗ', 'ಮಾನಸ ಸರೋವರಕ್ಕೆ ಪ್ರೇಮಯಾನ', 'ಕೈದಿ' ಕಾದಂಬರಿಗಳು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡಿವೆ. 'ತಾಯಿ' ಕತೆ ಟೀವಿ ಧಾರಾವಾಹಿಯಾಗಿ, ಸಣ್ಣಕತೆಗಳು 'ಪ್ರೀತಿಪ್ರೇಮ' ಟೀವಿ ಧಾರಾವಾಹಿ ಸರಣಿಯಲ್ಲಿ ಪ್ರಸಾರವಾಗಿವೆ. ಕನ್ನಡದ ಪ್ರಸಿದ್ಧ ಲೇಖಕರ ಕತೆಗಳನ್ನು ತೆಲುಗಿಗೆ ಅನುವಾದಿಸಿದ್ದು, ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.